SRI QUMARUL ISLAM.— Sir, when will this be taken up ?

MR. SPEAKER.— The House now stands adjourned to reassemble again at 2-10PM.

(The House adjourned at Ten minutes past one of the Clock)

(ಮತ್ತೆ ಸದನವು ೨-೧೦ಕ್ಕೆ ಸಮಾವೇಶಗೊಂಡಿತು.)

(ಉಪಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆಗಳು

ವಿಕ್ಟೋರಿಯಾ ಆಸ್ಪತ್ರೆಯ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ಉದ್ಭವವಾಗಿರುವ ಸಮಸ್ಯೆ

ಉಪಾಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆಗಳು ಮೊದಲ ಗಮನ ಸೆಳೆಯುವ ಸೂಚನೆಗಳು, ಶ್ರೀ ಡಿ. ಬಿ ಚಂದ್ರೇಗೌಡ, ಶ್ರೀ ಪಿ. ಜಿ.ಆರ್. ಸಿಂಧ್ಯ ಅವರದ್ದು

ಶ್ರೀ ಪಿ.ಜಿ.ಆರ್. ಸಿಂಧ್ಯ.— ಮಾನ್ಯ ಉಪಾಧ್ಯಕ್ಷರೇ, ವಿಕ್ಟೋರಿಯಾ ಆಸ್ಪತ್ರೆಯ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ಉದ್ಭವವಾಗಿರುವ ಸಮಸ್ಯೆಯ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).— ಮಾನ್ಯ ಉಪಾಧ್ಯಕ್ಷರೇ, ನನ್ನ ಹೇಳಿಕೆ ಈ ರೀತಿ ಇದೆ:

ವಿಕ್ಟೋರಿಯಾ ಆಸ್ಪತ್ರೆಯ ಮುಖ್ಯ ದ್ವಾರವು ಈಗ ಬೆಂಗಳೂರು ಕೋಟೆಯ ಪಕ್ಕಕ್ಕೆ ಕೃಷ್ಣರಾಜೇಂದ್ರ ರಸ್ತೆಗೆ ಕೂಡಿಕೊಂಡಂತೆ ಇದೆ. ಮೊದಲು ಇದ್ದ ಕೃಷ್ಣರಾಜೇಂದ್ರ ಮಾರುಕಟ್ಟೆಯ ಎದುರಿಗಿನ ದ್ವಾರವನ್ನು ಮುಚ್ಚಿ ಕೆಲವಾರು ವರ್ಷಗಳು ಆಗಿವೆ. ಈಗಿರುವ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ರೋಗಿಗಳಿಗಾಗಲಿ ಅಥವಾ ಸಾರ್ವಜನಿಕರಿಗಾಗಲಿ ಯಾವ ರೀತಿಯ ಸಮಸ್ಯೆಗಳು ಉದ್ಭವಿಸಿದ್ದು ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸಭಾಧ್ಯಕ್ಷರಿಣಿಯವರೇ, ಮಾನ್ಯ ಆರೋಗ್ಯ ಸಚಿವರು ತಮ್ಮ ಉತ್ತರದಲ್ಲಿ '' ಮೊದಲು ಇದ್ದ ಕೃಷ್ಣರಾಜೇಂದ್ರ ಮಾರುಕಟ್ಟೆಯ ಎದುರಿಗಿನ ದ್ವಾರವನ್ನು ಮುಚ್ಚಿ ಕೆಲವಾರು ವರ್ಷಗಳು ಆಗಿವೆ. ಈಗಿರುವ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ರೋಗಿಗಳಿಗಾಗಲಿ ಅಥವಾ ಸಾರ್ವಜನಿಕರಿಗಾಗಲಿ ಯಾವ ರೀತಿಯ ಸಮಸ್ಯೆಗಳು ಉದ್ಭವಿಸಿದ್ದು ಗಮನಕ್ಕೆ ಬಂದಿಲ್ಲ'' ಎಂದು ಹೇಳಿದ್ದಾರೆ.'' ನನಗೆ ಗೊತ್ತಿರುವ ಹಾಗೆ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆಯೇ ? ಇದರ ಬಗ್ಗೆ ವಿವರಣೆಯನ್ನು ಕೊಡಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷರಿಣಿಯವರೇ, ಮಾನ್ಯ ಸದಸ್ಯರಿಗೆ ಯಾರೋ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಈಗ ಮುಖ್ಯದ್ವಾರದ ಬಗ್ಗೆ ಪ್ರಶ್ನೆಯೇ ಉದ್ಭವಿಸಿಲ್ಲ. ಈಗ ಅಲ್ಲಿ ಏನಾಗಿದೆ ಎಂದರೆ ನರ್ಸಿಸ್ ಕ್ವಾರ್ಟರ್ಸ್ ಹತ್ತಿರ ಒಂದು 'ವಿಕೆಟ್ ಗೇಟ್' ಓಪನ್ ಮಾಡಬೇಕೆಂದು ರಿಕ್ವೆಸ್ಟ್ ಬಂದಿದೆ. ಅದನ್ನು ಮಾಡಿಸುವುದಕ್ಕೆ ನಾವು ಹೊರಟಿದ್ದೇವೆಯೇ ಇಲ್ಲಿ ಮುಖ್ಯ ದ್ವಾರವನ್ನು ತೆಗೆಸತಕ್ಕಂಥ ಪ್ರಶ್ನೆಯೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಉಪಾಧ್ಯಕ್ಷರಿಣಿಯವರೇ, ನಾನು ಸಹಾ ಕಾಲಿಂಗ್ ಅಟೆನ್ಷನ್‌ಗೆ ಸಹಿ ಹಾಕಿದ್ದೇನೆ.

ಉಪಾಧ್ಯಕ್ಷರು.—ನೀವು ಸಹಿ ಹಾಕಿದ್ದೀರಾ ?

ಶ್ರೀ ವಾಟಾಳ್ ನಾಗರಾಜ್.—ಹಾಕಿದ್ದೇನೆ. ಚಂದ್ರೇಗೌಡರು, ಸಿಂಧ್ಯರವರ ಜೊತೆಯಲ್ಲಿ ನಾನು ಸಹಿಯನ್ನು ಹಾಕಿದ್ದೇನೆ.

ಉಪಾಧ್ಯಕ್ಷರು.—ಹಾಗಾದರೆ ಹೇಳಿ.

ಶ್ರೀ ಪಿ.ಜಿ. ಆರ್. ಸಿಂಧ್ಯ —ನಾನು ಇನ್ನೂ ಮುಗಿಸಿಲ್ಲ. ನನಗೆ ಬೇಕಾಗಿರುವಕ್ಕಂಥದ್ದೂ ಮುಖ್ಯ ದ್ವಾರವನ್ನು ತೆರೆದಿದ್ದಾರೆಯೇ ಇಲ್ಲವೇ ? ಅದು ಓಪನ್ ಆಗಿದೆಯೇ ? ಇಲ್ಲದಿದ್ದರೆ ಅದು ಕ್ಲೋಸ್ ಏನಾದರೂ ಆಗಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್.—ಇಲ್ಲಿ ಮುಖ್ಯದ್ವಾರ ತೆಗೆಯುವ ಪ್ರಶ್ನೆಯೇ ಇಲ್ಲ.

ಶ್ರೀ ಪಿ.ಜಿ. ಆರ್. ಸಿಂಧ್ಯ.—ಮುಖ್ಯದ್ವಾರವನ್ನು ತೆಗೆದಿಲ್ಲ ತಾನೇ.

ಶ್ರೀಮತಿ ಮನೋರಮಾ ಮಧ್ವರಾಜ್.—ತೆಗೆಯುವುದಿಲ್ಲ.

ಶ್ರೀ ಪೆಜಾ. ವಿಕಾಂತಯ್ಯ.—ಮಾನ್ಯ ಉಪಾಧ್ಯಕ್ಷಣಿಯವರೇ. ಈಗ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ, ಇದರಲ್ಲಿರುವುದಕ್ಕೂ ಮಾನ್ಯ ಮಂತ್ರಿಗಳು ಹೇಳುವುದಕ್ಕೂ ಒಂದಕ್ಕೊಂದಕ್ಕೆ ತದ್ವಿರುದ್ಧವಾಗಿದೆ. ಉತ್ತರದಲ್ಲಿ ಏನು ಹೇಳುತ್ತಾರೆ ಎಂದರೆ ' ಈಗ ಇರುವ ಮುಖ್ಯ ದ್ವಾರವನ್ನು ತೆರೆದಿರುವುದರಿಂದ ರೋಗಿಗಳಿಗಾಗಲಿ ಅಥವಾ ಸಾರ್ವಜನಿಕರಿಗಾಗಲಿ ಯಾವ ರೀತಿಯ ಸಮಸ್ಯೆಗಳೂ ಉದ್ಭವಿಸಿದ್ದು ಗಮನಕ್ಕೆ ಬಂದಿಲ್ಲ ' ಎಂದು ಹೇಳಿದ್ದಾರೆ. ಹಾಗಾದರೆ ಈ ದ್ವಾರವನ್ನು ತೆರೆದಿದ್ದಾರೆಯೇ ? ಅಥವಾ ಮುಚ್ಚಿದ್ದಾರೆಯೇ ? ಮಾನ್ಯ ಮಂತ್ರಿಗಳು ಹೇಳುವ ರೀತಿ ಅದನ್ನು ಮುಚ್ಚಿದ್ದೇವೆ ಎಂದು ಹೇಳುವುದಾದರೆ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಉಪಾಧ್ಯಕ್ಷಣಿಯವರೇ ಈಗ ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಮುಂಜಿ ಮೂರು ನಾಲ್ಕು ದ್ವಾರಗಳಿದ್ದವು ಅವುಗಳ ಪೈಕಿ ಈಗ ಒಂದೇ ಮುಖ್ಯದ್ವಾರ ತೆರೆದಿರುವುದು ಹಾಗೂ ಮತ್ತೊಂದು ದ್ವಾರವನ್ನು ಸಾರ್ವಜನಿಕರು ತೆಗೆಯ ಬೇಕೆಂದು ಹೇಳಿದ್ದು ಅದು ಕೋರ್ಟಿಗೆ ಕೂಡ ಹೋಗಿ ಅದು ಮುಚ್ಚಿದ್ದು ಸರಿಯೆಂದು ಕೋರ್ಟಿನಿಂದ ಆದೇಶ ಕೂಡ ಬಂದಿದೆ. ಈ ರೀತಿ ನಮ್ಮ ಶಾಸಕರ ಮುಖಾಂತರ ಮನವಿ ಏನು ಬಂದಿದೆ ಅಂದರೆ ಅಲ್ಲಿ ಒಂದು ವಿಕೆಟ್ ಗೇಟ್ ಅನ್ನು ಓಪನ್ ಮಾಡಬೇಕೆಂದು ವಿಕೆಂದರೆ ಜನಂಗೆ ಹೋಗಲಿಕ್ಕೆ ಬರಲಿಕ್ಕೆ ತೊಂದರೆ ಆಗುತ್ತದೆ ಎಂದು. ಆಸ್ಪತ್ರೆಯ ಮುಖ್ಯಸ್ಥರು ನನ್ನನ್ನು ಕರೆದುಕೊಂಡು ಅಲ್ಲಿ ಕೋರ್ಟಿನ ಆದೇಶ ಏನು ಬಂದಿದೆ ಅದನ್ನು ತೋರಿಸಿದರು ನನಗೆ ಕೂಡ ಮಿಸ್‌ಗೈಡ್ ಮಾಡಿದರು. ಅದನ್ನು ನೋಡಿ ಮಾನ್ಯ ಶಾಸಕರಿಗೆ ಹೇಳಿದೆ. ಅದನ್ನು ಓಪನ್ ಮಾಡಲಿಕ್ಕೆ ಬರುವುದಿಲ್ಲ ಎಂದು. ಆಫ್ಟರ್‌ಲ್ಲಿ ಮಾನ್ಯ ಶಾಸಕರು ನನ್ನನ್ನು ಕರೆದುಕೊಂಡು ಹೋಗಿ ಬೇರೆ ಜಾಗ ನರ್ಸಸ್ ಕ್ವಾರ್ಟರ್ಸ್ ಹತ್ತಿರ ಒಂದು ಸಣ್ಣ ವಿಕೆಟ್ ಗೇಟ್ ಬೇಕು ಎಂದು ಮಕ್ಕಳಿಗೆ ಶಾಲೆಗೆ ಹೋಗಲಿಕ್ಕೆ ತೊಂದರೆ ಆಗುತ್ತದೆ ಎಂದು ಕೇಳಿದರು. ಮಾನ್ಯೆಯ ದಿವಸ ನೀರು ಇರಲಿಲ್ಲ. ಒಂದು ಕಿಲೋಮೀಟರ್ ಸುತ್ತುವರಿದುಕೊಂಡು ನೀರು ತರುವ ಬವಣೆ ನೋಡಿದರೆ ಯಾರಿಗಾದರೂ ಆಗಲಿ ಅದು ದುಃಖವಾಗುವ ಸಂಗತಿ. ಆದಕ್ಕೋಸ್ಕರ ಅಲ್ಲಿ ವಿಕೆಟ್ ಗೇಟ್ ಓಪನ್ ಮಾಡಲಿಕ್ಕೆ ಆದೇಶ ಕೊಟ್ಟಿದ್ದೇನೆ. ನರ್ಸಸ್ ಕ್ವಾರ್ಟರ್ಸ್ ಹತ್ತಿರ ತೆಗೆದಿರುವುದಕ್ಕೂ ಮುಖ್ಯ ದ್ವಾರಕ್ಕೂ ಸಂಬಂಧ ಇಲ್ಲ. ನನಗೆ ಕೂಡ ಮಿಸ್ ಗೈಡ್ ಮಾಡಿದ್ದಾರೆ. ಅವರಿಗೆ ವಿವರಣೆ ಕೂಡ ಕೇಳಿದ್ದೇನೆ. ಯಾಕೆ ಈ ರೀತಿ ಮಾಡಿದ್ದೀರಿ ಎಂದು.

ಶ್ರೀ ಡಿ.ಬಿ. ಚಂದ್ರೇಗೌಡ.—ಇಲ್ಲಿ ಮುಖ್ಯ ದ್ವಾರವನ್ನು ತೆಗೆಯುವುದರಿಂದ ರೋಗಿಗಳಿಗಾಗಲೀ ಸಾರ್ವಜನಿಕರಿಗೆ ಆಗಲಿ ಯಾವ್ದೇ ರೀತಿಯ ಸಮಸ್ಯೆಗಳು ಉದ್ಭವಿಸಿಲ್ಲ ಎಂದು ಹೇಳಿದ್ದೀರಿ . .

ಶ್ರೀಮತಿ ಮನೋರಮಾ ಮಧ್ವರಾಜ್.—ತಾವು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿದ್ದೇನೆ. ನೀವು ಕೇಳಿರುವುದಕ್ಕೆ ಉತ್ತರ ಕೊಡಬೇಕಲ್ಲ, ಅಧಿಕ ಪ್ರಸಂಗಿತನ ನಮಗೆ ಯಾಕೆ. .

ಶ್ರೀ ಡಿ. ಬಿ. ಚಂದ್ರೇಗೌಡ.—ತಾವು ಏನು ಹೇಳಿದ್ದೀರಿ. ಮುಖ್ಯ ದ್ವಾರ ತೆಗೆಯುವುದರಿಂದ ರೋಗಿಗಳಿಗಾಗಲೀ ಅಥವಾ ಸಾರ್ವಜನಿಕರಿಗಾಗಲೀ ಯಾವುದೇ ಸಮಸ್ಯೆ ಉದ್ಭವಿಸಿರುವುದು ಗಮನಕ್ಕೆ ಬಂದಿಲ್ಲ ಎಂದು .

ಶ್ರೀಮತಿ ಮನೋರಮಾ ಮಧ್ವರಾಜ್.—ತಾವು ಏನು ಪ್ರಶ್ನೆ ಹಾಕಿದ್ದೀರಿ ನೋಡಿಕೊಳ್ಳಿ ...

ಶ್ರೀ ಡಿ. ಬಿ. ಚಂದ್ರೇಗೌಡ.— ನಾನು ಏನು ಪ್ರಶ್ನೆ ಕೇಳಿದ್ದೆ ಅಂದರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮುಖ್ಯ ದ್ವಾರವನ್ನು ತೆಗೆಯುವುದರಿಂದ ಉಂಟಾಗಿರುವ ಸಮಸ್ಯೆ ಬಗ್ಗೆ .. ಮುಖ್ಯ ದ್ವಾರವನ್ನು ತೆಗೆದಿಲ್ಲ ಎಂದ ಮೇಲೆ ಸಾರ್ವಜನಿಕರಿಗಾಗಲೀ ಅಥವಾ ರೋಗಿಗಳಿಗಾಗಲೀ ಯಾವ ಸಮಸ್ಯೆಯೂ ಆಗುವುದಿಲ್ಲ ಎಂದು ಹೇಳುತ್ತೀರಿ ಕಾರಣ ಇಷ್ಟೇ, ಅಲ್ಲಿ ಬೋರ್ಡ್ ಆಫ್ ವಿಸಿಟರ್ಸ್ ಎಂದು ಇದ್ದಾರೆ. ಅವರು ಒಂದು ತರಾವು ಮಾಡಿದ್ದಾರೆ. ಇದನ್ನು ತೆಗೆಯಬಾರದು ಎಂದು. ಧರ್ಮಾಶಾಲಾ ಸಮಿತಿಯವರೂ ಸಹ ತರಾವು ಮಾಡಿದ್ದಾರೆ, ಇದನ್ನು ತೆಗೆಯಬಾರದು ಎಂದು. ಅವರು

ರಿಟ್ ಪಿಟಿಷನ್ ಹಾಕಿದ್ದಾರೆ, ಕೋರ್ಟಿನವರು ಆಲ್ಲಿ ಮುಖ್ಯ ದ್ವಾರವನ್ನು ತೆಗೆಯಬಾರದೆಂ ಎಂದು ಹೇಳಿದ್ದಾರೆ. ಆ ಮೇಲೆ ತುಂಬಾ ಫಿಲ್ಟರೇಜ್‌ಗಳು ಆ ರಸ್ತೆಯಲ್ಲಿ ಆಗುತ್ತಿದೆ ಎಂದು ಈ ರೀತಿ ಮಾಡಲಾಗಿತ್ತು. ಈಗ ಎಷ್ಟು ದೂರ ಹೋಗಿದೆ ಅಂದರೆ ಕ್ವಾರ್ಟರ್ಸ್‌ನವರಿಗೆ ತೊಂದರೆ ಆಗುತ್ತಿದೆ ಎಂದು ಹೇಳಿದ್ದಾರೆ ಎಂದು ತಾವು ಏನು ಹೇಳುತ್ತೀರಿ, ಆ ಪರಿಸ್ಥಿತಿ ಹಿಂದೆ ಆದು ತೆಗೆದಿದ್ದಾಗ ಅನುಭವಿಸಿದವರಿಗೆ ಪಾಠ ಗೊತ್ತಾ. ಎಲ್ಲಕ್ಕಿಂತ ಹೆಚ್ಚಾಗಿ ನಾವು ಈ ಬಗ್ಗೆ ಯಾಕೆ ಗಮನ ಸೆಳೆಯುವ ಸೂಚನೆ ಕಳಿಸಿದ್ದೇವೆಂದರೆ ಇದನ್ನು ಪ್ರಿಸ್ಟೀಜ್ ಇಶ್ಯೂ ಆಗಿ ಮಂತ್ರಿಗಳು ತೆಗೆದುಕೊಂಡು ಬಿಟ್ಟರೆ ಅಲ್ಲಿರತಕ್ಕ ಸೂಪರಿಟೆಂಡೆಂಟ್‌ರವರಾಗಲಿ ಆಥವಾ ಡಾಕ್ಟರ್ಸ್ ಆಗಲಿ ಇದನ್ನು ತೆರೆಯುವುದಾದರೆ ನಾನು ರಾಜೀನಾಮೆ ಕೊಡುತ್ತೇನೆ ಎನ್ನುವವರೆಗೆ ಹೋದರೆ ಕಷ್ಟ. ಈ ವಿಚಾರಗಳನ್ನು ಎಲ್ಲಾ ತಜ್ಞರು ಹೇಳಿರುವಾಗ ಇದಕ್ಕೆ ತದ್ವಿರುದ್ಧವಾದ ತೀರ್ಮಾನವನ್ನು ಯಾಕೆ ಮಾಡಿದ್ದೀರಿ ?

ಶ್ರೀಮತಿ ಮನೋರಮಾ ಮಧ್ವರಾಜ್ — ತಾವು ಕೇಳಿದ್ದು ಮುಖ್ಯ ದ್ವಾರ ಅಲ್ಲ. ನೀವು ಹೋಗಿ ಬಂದ ನಂತರ ಪ್ರಶ್ನೆ ಕೇಳಬೇಕಲ್ಲವೇ ? ಈಗ ಮುಖ್ಯ ದ್ವಾರ ಅಂದರೆ ಕೋಟೆ ಹತ್ತಿರ ಇರುವುದು. ಇನ್ನೊಂದು ದ್ವಾರ ಇರುವುದು ಕೆ.ಆರ್. ಮಾರ್ಕೆಟ್ ಹತ್ತಿರ ಅದನ್ನು ತೆಗೆಯುವ ಪ್ರಶ್ನೆ ಇಲ್ಲ. ನರ್ಸಸ್ ಕ್ವಾರ್ಟರ್ಸ್ ಹತ್ತಿರ ಸಣ್ಣ ವಿಕೆಟ್ ಗೇಟ್ ತೆಗೆದಿದ್ದೇವೆ. ಇದನ್ನೆಲ್ಲಾ ಎಲ್ಲರಿಗೂ ಮಿಸ್‌ಗೈಡ್ ಮಾಡುತ್ತಿದ್ದಾರೆ. ನನ್ನೂ ಕೂಡ ಮಿಸ್ ಗೈಡ್ ಮಾಡಿದ್ದಾರೆ. ಇದನ್ನು ನಾನು ತಡೆದುಕೊಳ್ಳಲಿಕ್ಕೆ ಸಾಧ್ಯ ಇಲ್ಲ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಲೇಬೇಕಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಉತ್ತರದಲ್ಲಿ ತಾವು ಏನು ಹೇಳಿದ್ದೀರಿ. ಮುಖ್ಯ ದ್ವಾರವನ್ನು ತೆಗೆಯುವುದರಿಂದ ತೊಂದರೆ ಆಗಿದೆ ಎಂದು.

ಶ್ರೀಮತಿ ಮನೋರಮಾ ಮಧ್ವರಾಜ್.— ಮುಖ್ಯ ದ್ವಾರ ತೆಗೆಯುವುದರಿಂದ ಏನು ತೊಂದರೆ ಆಗಿದೆ ? ಏನೂ ಆಗಿಲ್ಲ. ನೀವು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ,

ಉಪಾಧ್ಯಕ್ಷರು.— ಈಗ ಕನ್‌ಫ್ಯೂಷನ್ ಏಕೆ ? ಯಾವುದು ಮುಖ್ಯ ದ್ವಾರ, ಯಾವುದು ಅಲ್ಲ ಎಂದು ಮಂತ್ರಿಗಳೇ ತಿಳಿಸಲಿ, ಯಾವುದು ಮುಖ್ಯ ದ್ವಾರ ಎಂದು?

ಶ್ರೀ ಡಿ. ಬಿ. ಚಂದ್ರೇಗೌಡ.— ಈಗ ಯಾವ ದ್ವಾರವನ್ನು ತೆಗೆಯಬೇಕು ಎಂದು ಇರುವುದು. ಯಾವುದನ್ನು ತೆಗೆಯಬಾರದು ಎಂದು ಇರುವುದು.

ಶ್ರೀಮತಿ ಮನೋರಮಾ ಮಧ್ವರಾಜ್.— ಮುಖ್ಯ ದ್ವಾರ ಇರುವುದು ಕೋಟೆ ಹತ್ತಿರ ಕೆ. ಆರ್. ಮಾರ್ಕೆಟ್ ಹತ್ತಿರ ಇರುವುದು ಹೊರಗಡೆಯದು. ಅದನ್ನು ತೆಗೆಯುವ ಪ್ರಶ್ನೆ ಇಲ್ಲ. ಈಗ ಇರುವುದು ಕೋಟೆ ಹತ್ತಿರ ಅಷ್ಟೇ...

ಉಪಾಧ್ಯಕ್ಷಿಣಿಯವರು.— ನಿಮಗೆ ಇನ್ನು ಏನು ಬೇಕು ವಾಟಾಳ್‌ರವರೇ ? ಎಲ್ಲಾ ಹೇಳಿಬಿಟ್ಟರಲ್ಲ...

ಶ್ರೀ ವಾಟಾಳ್ ನಾಗರಾಜ್. — ನಾನು ನಿಂತಾಗ ಇನ್ನು ಏನು ಬೇಕು ಎಂದು ಕೇಳುತ್ತೀರಿ. ನನಗೆ ತಾವು ನ್ಯಾಯ ದೊರಕಿಸಿಕೊಡುತ್ತಿಲ್ಲ ನೀವು ನಾನು ನಿಂತಾಗಲೇ ಗಂಟೆ ಹೊಡೆಯುತ್ತೀರಿ. ನೀವು ಯಾವಾಗಲೂ ಬರೇ ಮೂರು ಜನರಿಗೆ ಅಂದರೆ ಹಿಂಧ್ಯಾ ಅವರಿಗೆ, ಚಂದ್ರೇಗೌಡರಿಗೆ, ಹಾಗೂ ಏಕಾಂತಯ್ಯನವರಿಗೆ ಅವಕಾಶ ಕೊಡುತ್ತೀರಿ. ಇಲ್ಲಿ ಇನ್ನು ಯಾರೂ ಇಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.— ತಮ್ಮ ಹೆಸರು ಈ ಗಮನ ಸೆಳೆಯುವ ಸೂಚನೆಯಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್.— ಅವರನ್ನೇ ಬೇಕಾದರೆ ಕೇಳಿ ಬೇಕಾದರೆ, ನನ್ನ ಸಹಿ ಸಹ ಹಾಕಿದ್ದೇನೆ. ಇವರು ಮುದ್ರಣ ಮಾಡಿಲ್ಲ ಎಂದರೆ ನಾನು ಹೊಣೆಯೇ ?

ಉಪಾಧ್ಯಕ್ಷಿಣಿಯವರು.— ತಮ್ಮ ಹೆಸರು ನಮ್ಮ ಪಟ್ಟಿಯಲ್ಲಿ ಬಂದಿಲ್ಲ, ಆದರೂ ಹೆಸರು ಕೊಟ್ಟಿದ್ದೇನೆ ಎಂದು ಹೇಳುತ್ತೀರಿ, ಕೇಳಿ...

ಶ್ರೀ ವಾಟಾಳ್ ನಾಗರಾಜ್.— ಈಗ ಇಲ್ಲಿ ಸಮಸ್ಯೆ ಇರುವುದು ನಾವು ಯಾವ ದ್ವಾರವನ್ನು ತೆಗೆಯಬೇಕು, ಎಂದು. ಯಾವುದನ್ನು ಬೇಕಾದರೂ ತೆಗೆಯಿರಿ, ಇದರ ಬಗ್ಗೆ ನಮ್ಮ ತಕರಾರು ಇಲ್ಲ. ಹಿಂದೆ ಯಾವುದು ಮುಖ್ಯ ದ್ವಾರ ಎಂದು ನಿರ್ಧಾರ ಆಗಿರಲಿಲ್ಲ. ಕೃಷ್ಣರಾಜ ಮಾರ್ಕೆಟ್ ಮುಂದೆ ಇರುವಂಥಾದ್ದು ಮುಖ್ಯವಾದ ದ್ವಾರ ಎಂದು ನಿರ್ಧಾರವಾಗಿತ್ತು. ವಿಕ್ಟೋರಿಯ ಆಸ್ಪತ್ರೆಯ ಕೋಟ್ಯಾಂತರ ಜನ ಪಿರಂಗಿತಕ್ಕಥ ಒಂದು ದೊಡ್ಡ ದ್ವಾರ ಇದು. ಈ ದ್ವಾರವನ್ನು ಇದ್ದಕ್ಕಿದ್ದ ಹಾಗೆ ಮುಚ್ಚಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ಒಂದು ದ್ವಾರವನ್ನು ಮುಚ್ಚಿರುವುದು ಒಂದೇ ಆಲ್ಲ,

ವಿಕ್ಟೋರಿಯ ಆಸ್ಪತ್ರೆಯ ಸುತ್ತ ಅಂಗಡಿಗಳು ಇದೆಯಲ್ಲ, ಆ ಅಂಗಡಿಗಳು ಸಹ ನಿಮ್ಮ ಆಸ್ತಿಯನ್ನು ಮುಚ್ಚಿಕೊಂಡಿವೆ. ಎಲ್ಲ ದ್ವಾರಗಳನ್ನು ಮುಚ್ಚಿರತಕ್ಕಂಥ ಒಂದು ಕೆಟ್ಟ ಅಂಗಡಿಗಳ ಸಾಲು ಅಲ್ಲಿ ಇದೆ. ಅದನ್ನು ತೆಗೆಯಿಸುವುದಕ್ಕೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಇವತ್ತು ಅಲ್ಲಿ ಹಲ್ಲಿನ ತಜ್ಞರ ಆಸ್ಪತ್ರೆ ಇದೆ. ಒಳಗಡೆ ಪ್ರಮುಖವಾದ ಅನೇಕ ವಿಧವಾದ ಆಸ್ಪತ್ರೆಗಳು ಇರುವಾಗ ಈ ರೀತಿಯಾಗಿ ಕಲುಷಿತವಾದಂಥ ವಾತಾವರಣ ನಿರ್ಮಾಣ ಮಾಡತಕ್ಕಂಥ ಅಂಗಡಿ ಷೆಡ್‌ಗಳು ಏನಿವೆ ಇದು ಯಾರದೋ ಉದ್ಧಾರಕ್ಕೆ, ಯಾರದೋ ವ್ಯಾಪಾರಕ್ಕೆ, ಯಾರೋ ಒಬ್ಬ ದಲ್ಲಾಳಿಗಳ ವ್ಯಾಪಾರ ಕ್ಕೋಸ್ಕರವಾಗಿ ಅಲ್ಲಿ ಇರುವುದಾಗಿದ್ದರೆ, ಕಾನೂನಾದರೂ ತಂದು ಅವನ್ನು ಹೊರಗೆ ಹಾಕಿ. ಈಗ ಒಂದೇ ಒಂದು ಮುಖ್ಯದ್ವಾರ ಕೋಟೆ ಪಕ್ಕದಲ್ಲಿ ಇದೆಯಲ್ಲ, ಅದು ಮುಖ್ಯದ್ವಾರ ಎಂದು ನಿರ್ಧಾರ ಮಾಡಿಲ್ಲ, ಅಲ್ಲಿ ಒಂದು ಬಾಗಿಲು ಇದೆ. ಆದರೆ ಈ ಕಡೆನೂ ಒಂದು ಬಾಗಿಲು ತೆಗೆಯಿರಿ. ತಪ್ಪೇನೂ ಆಗುವುದಿಲ್ಲ. ಪ್ರತಿದಿನ ಸಾಮಾನ್ಯ ಜನ ತಕ್ಷಣ ಬ್ರೆಡ್ ತೆಗೆದುಕೊಂಡು ಹೋಗತಕ್ಕವರು, ಟೀ ತೆಗೆದು ಕೊಂಡು ಹೋಗುವುದಕ್ಕೆ ಬರತಕ್ಕವರು, ಔಷಧಿ ತೆಗೆದುಕೊಂಡು ಹೋಗುವುದಕ್ಕೆ ಬರತಕ್ಕವರಿಗೆ ಅನುಕೂಲವಾಗತಕ್ಕಂಥ ವ್ಯವಸ್ಥೆ ಇದೆ. ಕೋಟೆಯ ಒಳಗಡೆ ನಾಲ್ಕೈದು ವಿವಿಧ ಆಸ್ಪತ್ರೆಗಳಿವೆ. ನೀವು ಒಂದೇ ಕಡೆಯಿಂದ ನುಗ್ಗಬೇಕು ಅಂದರೆ ಕಷ್ಟವಾಗುತ್ತದೆ. ಒಂದೇ ಕಡೆಯಿಂದ ನುಗ್ಗಬೇಕಾದರೆ ಅಲ್ಲಿ ರಸ್ತೆ ದಾಟಬೇಕಾದರೆ ಎಷ್ಟು ಬಸ್ಸಿನ ಸಂಚಾರ ಇದೆ ಎನ್ನುವಂಥಾದ್ದನ್ನು ತಾವು ನೋಡಬೇಕು. ಆದ್ದರಿಂದ ಈ ಬಾಗಿಲನ್ನು ತೆಗೆಯಿರಿ. ಈ ಒಂದು ಬಾಗಿಲು ಬಗ್ಗೆ ೩-೪ ಜನ ಪ್ರಯತ್ನ ಪಡುತ್ತಿದ್ದಾರೆ ಎಂದು ಅಲ್ಲ. ಈ ಬಾಗಿಲಿನಿಂದ ಲಕ್ಷೋಪಂತರ ಜನತೆಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ದಯಮಾಡಿ ಈ ಕಡೆ ಬಾಗಿಲು ತೆಗೆಸತಕ್ಕಂಥಾದ್ದು ಒಂದು. ಎರಡನೆಯದು, ಯಾವುದೇ ಕಾರಣದಿಂದಲೂ ಅಂಗಡಿಗಳು ಅಲ್ಲಿ ಇರಬಾರದು. ಇದಕ್ಕೆ ಈ ಸಭೆಯಿಂದ ಎಲ್ಲ ರೀತಿಯಿಂದ ಬೆಂಬಲ ಕೊಡುತ್ತೇವೆ. ದಯಮಾಡಿ ಯಾರೇ ಆಗಿರಬಹುದು, ಎಷ್ಟೇ ಪ್ರಭಾವಯುತ ವ್ಯಕ್ತಿಗಳಾಗಿರಲಿ, ಅಲ್ಲಿರುವ ಅಂಗಡಿಗಳು ಹೊರಗೆ ಹೋಗಲೇಬೇಕು. ಇಲ್ಲದೇಹೋದರೆ ಅದು ಆಸ್ಪತ್ರೆ ಎಂದು ಅನಿಸಿ ಕೊಳ್ಳುವುದಿಲ್ಲ. ಆಸ್ಪತ್ರೆ ಒಳಗಿರುವ ವಿಚಾರವನ್ನು ನಾವು ಆಮೇಲೆ ನಿಮ್ಮ ಇಲಾಖೆಯ ಬೇಡಿಕೆ ಬಂದಾಗ ಪ್ರಾತಿನಾಡುತ್ತೇವೆ. ಇವತ್ತು ದಯಮಾಡಿ ಈ ಪ್ರಶ್ನೆಯನ್ನು ಬಗೆಹರಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಸಭಾಧ್ಯಕ್ಷರೆ, ಮುಚ್ಚಿದ ಬಾಗಿಲನ್ನು ತೆಗೆಯಬೇಕು ಎಂದು ಹೇಳಿದ್ದಾರೆ, ಮುಖ್ಯ ದ್ವಾರ ಮುಚ್ಚಬಾರದು ಎಂದು ಹೇಳಿದ್ದಾರೆ. ನಾನು ಆಗಲೇ ಹೇಳಿದ ಹಾಗೆ, ನರ್ಸಸ್ ಕ್ವಾರ್ಟರ್ಸ್ ಏನಿದೆ. ಆ ಕಡೆ ವಿಕೆಟ್ ಗೇಟ್ ಓಪನ್ ಮಾಡುವಂಥಾದ್ದು ನಿಜವಾಗಿ ಆಗತ್ಯ ಉಂಟು. ಮತ್ತು ಅಂಗಡಿ ಬಗ್ಗೆ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ನಮ್ಮ ಬೇಡಿಕೆ ಬಂದಾಗ ತಾವು ಪ್ರಾತನಾಡಿ, ಅದಕ್ಕೆ ಸೂಕ್ತವಾದಂಥ ಉತ್ತರವನ್ನು ನಾನು ಕೊಡುತ್ತೇನೆ.

೩) ವೈದ್ಯಕೀಯ ಕಾಲೇಜುಗಳು ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ವೈದ್ಯಕೀಯ ಕಾಲೇಜುಗಳು ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಕಾನೂನು ೧೯೮೯ರ ೩ನೇ ವಿಧಿಯ ಪ್ರಕಾರ ವೈದ್ಯಕೀಯ ಮತ್ತು ಇಂಜನಿಯರಿಂಗ್ ಕಾಲೇಜುಗಳು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುವುದನ್ನು ನಿಷೇಧಿಸಲಾಗಿದೆ. ಈ ವಿಧಿ ಜುಲೈ ೧೧, ೧೯೮೯ರಿಂದ ಜಾರಿಯಲ್ಲಿ ಬಂದಿದ್ದು ಇದೇ ವಿಧಿಯಲ್ಲಿ ೧೯೮೯ರವರೆಗೆ ಕೊಡಲಾದ ಕೆಲವು ರಿಯಾಯಿತಿಗಳನ್ನು ಹೊರತುಪಡಿಸಿ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುವುದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಈ ವಿಧಿಯನ್ನು ಉಲ್ಲಂಘಿಸಿದವರಿಗೆ ಇದೇ ಕಾನೂನಿನ ೭ನೇ ವಿಧಿ ಪ್ರಕಾರ ೩ ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೆರೆವಾಸ ವಾಸ ಮತ್ತು ೫ ಸಾವಿರ ರೂಪಾಯಿವರೆಗೆ ದಂಡ ವಿಧಿಸಬಹುದು. ಈ ಕಾನೂನು ಜಾರಿಗೆ ಬಂದ ನಂತರ ಖಾಸಗಿ ವಿದ್ಯಾಲಯಗಳ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳು ವಸೂಲು ಮಾಡ ಬಹುದಾದ ವಿದ್ಯಾ ಶುಲ್ಕವನ್ನು ಜೂನ್ ೫, ೧೯೮೯ರಂದು ನಿಗದಿಪಡಿಸಲಾಗಿದೆ.